| ಹಿಂದಿನ ಆವೃತ್ತಿಗಳ ಐಪಿಎಲ್ ಟೂರ್ನಿಯ ಚಾಂಪಿಯನ್ನರು | | |
|---|---|---|
| ವರ್ಷ | ಚಾಂಪಿಯನ್ಸ್ | ರನ್ನರ್ಸ್ ಅಪ್ |
| 2008 | ರಾಜಸ್ಥಾನ ರಾಯಲ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2009 | ಡೆಕ್ಕನ್ ಚಾರ್ಜಸ್ | ಆರ್‌ಸಿಬಿ |
| 2010 | ಚೆನ್ನೈ ಸೂಪರ್ ಕಿಂಗ್ಸ್ | ಮುಂಬೈ ಇಂಡಿಯನ್ಸ್ |
| 2011 | ಚೆನ್ನೈ ಸೂಪರ್ ಕಿಂಗ್ಸ್ | ಆರ್‌ಸಿಬಿ |
| 2012 | ಕೋಲ್ಕತ್ತ ನೈಟ್ ರೈಡರ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2013 | ಮುಂಬೈ ಇಂಡಿಯನ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2014 | ಕೋಲ್ಕತ್ತ ನೈಟ್ ರೈಡರ್ಸ್ | ಕಿಂಗ್ಸ್ ಇಲೆವನ್ ಪಂಜಾಬ್ |
| 2015 | ಮುಂಬೈ ಇಂಡಿಯನ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2016 | ಸನ್‌ರೈಸರ್ಸ್ ಹೈದರಾಬಾದ್ | ಆರ್‌ಸಿಬಿ |
| 2017 | ಮುಂಬೈ ಇಂಡಿಯನ್ಸ್ | ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್ |
| 2018 | ಚೆನ್ನೈ ಸೂಪರ್ ಕಿಂಗ್ಸ್ | ಸನ್‌ರೈಸರ್ಸ್ ಹೈದರಾಬಾದ್ |
| 2019 | ಮುಂಬೈ ಇಂಡಿಯನ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2020 | ಮುಂಬೈ ಇಂಡಿಯನ್ಸ್ | ಡೆಲ್ಲಿ ಕ್ಯಾಪಿಟಲ್ಸ್ |
| 2021 | ಚೆನ್ನೈ ಸೂಪರ್ ಕಿಂಗ್ಸ್ | ಕೋಲ್ಕತ್ತ ನೈಟ್ ರೈಡರ್ಸ್ |
| 2022 | ಗುಜರಾತ್ ಟೈಟನ್ಸ್ | ರಾಜಸ್ಥಾನ ರಾಯಲ್ಸ್ |
| 2023 | ಚೆನ್ನೈ ಸೂಪರ್ ಕಿಂಗ್ಸ್ | ಗುಜರಾತ್ ಟೈಟನ್ಸ್ |
| 2024 | ಕೋಲ್ಕತ್ತ ನೈಟ್ ರೈಡರ್ಸ್ | ಸನ್‌ರೈಸರ್ಸ್ ಹೈದರಾಬಾದ್ |

ಆಡಳಿತ ಮಂಡಳಿಗಳು ಐಪಿಎಲ್ ಬಳಿಕ ಹೊಸತನಕ್ಕೆ ಹೊಂದಿಕೊಂಡಿವೆ.

ಆಧುನಿಕ ಕ್ರಿಕೆಟ್‌ನಲ್ಲಿ ಆಟದ ಶೈಲಿಗಳ ವಿಕಾಸದ ಮೇಲೆ ಈ ಟೂರ್ನಿ ಮಹತ್ವದ ಪ್ರಭಾವ ಬೀರಿದೆ. ಬ್ಯಾಟಿಂಗ್ ತಂತ್ರಗಳಲ್ಲಿನ ನಾವೀನ್ಯತೆ ಪ್ರಭಾವ ಸ್ಪಷ್ಟವಾಗಿ ಕಂಡುಬಂದಿದೆ. ಐಪಿಎಲ್ ಹೊಸ ಮತ್ತು ಅಸಾಂಪ್ರದಾಯಿಕ ಹೊಡೆತಗಳನ್ನು ಪ್ರಯೋಗಿಸಲು ಆಟಗಾರರಿಗೆ ವೇದಿಕೆ ಒದಗಿಸಿ ಆಕ್ರಮಣಕಾರಿ ಆಟಕ್ಕೆ ಹೆಸರಾಗಿದೆ. ಆಟವನ್ನು ಆಡುವ ವಿಧಾನ ಬದಲಿಸಿದೆ. ತರಬೇತುದಾರರು ಯುವ ಕ್ರಿಕೆಟಿಗರಿಗೆ ತರಬೇತಿ ನೀಡುವ ವಿಧಾನದ ಮೇಲೂ ಪ್ರಭಾವ ಬೀರಿದೆ. ಬ್ಯಾಟಿಂಗ್ ಕೌಶಲಗಳನ್ನು ಅಭಿವೃದ್ಧಿಪಡಿಸುವತ್ತ ಗಮನಹರಿಸಿದೆ. ಪ್ರತಿಭಾನ್ವಿತ ಬೌಲರ್‌ಗಳು ತಮ್ಮ ಕೌಶಲಗಳನ್ನು ಪ್ರದರ್ಶಿಸಲು ಮತ್ತು ಹೊಸ ಬದಲಾವಣೆಗೆ ಹೊಂದಿಕೊಳ್ಳಲು ಐಪಿಎಲ್ ಜಗತ್ತಿನ ಕ್ರಿಕೆಟ್ ಲೋಕಕ್ಕೆ 'ಸಂಶೋಧನಾ ಕೇಂದ್ರ'ದಂತಿದೆ.

ಈ ಎಲ್ಲ ಹೊಸತನಗಳ ಪರಿಣಾಮವಾಗಿ ಬ್ಯಾಟ್ಸ್‌ಮನ್ ಪ್ರತಿ ಎಸೆತವನ್ನೂ ಬೌಂಡರಿ ಗೆರೆಗೆ ದಾಟಿಸಬಲ್ಲ, ಬೌಲರ್ ಪ್ರತಿ ಎಸೆತದಲ್ಲಿಯೂ ಅಪಾಯಕಾರಿಯಾಗಬಲ್ಲ ಶಕ್ತಿ ಗಳಿಸಿಕೊಂಡಿದ್ದಾನೆ. ಸ್ಪರ್ಧಾತ್ಮಕತೆ ಸವಾಲಿನಲ್ಲಿ ಉಳಿಯಲು ವೈವಿಧ್ಯಮಯ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಲು ಒತ್ತು ನೀಡಲಾಗಿದೆ. ಕ್ರಿಕೆಟ್‌ನಲ್ಲಿ ಆಡುವ ಶೈಲಿಗಳ ವಿಕಸನ, ವಿಶೇಷವಾಗಿ ಬ್ಯಾಟಿಂಗ್ ಮತ್ತು ಬೌಲಿಂಗ್ ತಂತ್ರಗಳ ಕ್ಷೇತ್ರಗಳಲ್ಲಿ ಆದ ಬದಲಾವಣೆಗೆ ಐಪಿಎಲ್ ಪ್ರಭಾವ ಸಾಕ್ಷಿಯಾಗಿದೆ. ಕಡಿಮೆ ಅವಧಿಯಲ್ಲಿ ಕ್ರಿಕೆಟ್ ಪ್ರೇಮಿಗಳನ್ನು ಸೆಳೆದಿಡುವಲ್ಲಿ ಐಪಿಎಲ್ ಯಶಸ್ವಿಯಾಗಿದೆ.

ಐಪಿಎಲ್‌ನಿಂದಾಗಿ ಬ್ಯಾಟ್ಸ್‌ಮನ್ ರ‍್ಯಾಂಪ್ ಶಾಟ್, ಡಿಲ್‌ಸ್ಕೂಪ್, ಹೆಲಿಕಾಪ್ಟರ್ ಶಾಟ್‌ನಂಥ ಆಕ್ರಮಣಕಾರಿ ಶೈಲಿಗಳನ್ನು ಕಲಿತುಕೊಂಡಿದ್ದಾರೆ. ಈ ರೀತಿಯ ಸ್ಫೋಟಕ ಹೊಡೆತಗಳು ಐಪಿಎಲ್ ಆಡುವ ಬಹಳಷ್ಟು ಬ್ಯಾಟ್ಸ್‌ಮನ್‌ಗಳ ಆಟದ ತಂತ್ರಗಾರಿಕೆಯ ಭಾಗವೇ ಆಗಿದೆ. ಬ್ಯಾಟಿಂಗ್ ತಂತ್ರಗಳಲ್ಲಿನ ಈ ಹೊಸತನ ಬ್ಯಾಟ್ಸ್‌ಮನ್‌ನಲ್ಲಿ ಹೆಚ್ಚು ಆಕ್ರಮಣಕಾರಿ ಮತ್ತು ನಿರ್ಭೀತ ಮನಸ್ಥಿತಿ ತಂದುಕೊಟ್ಟಿದೆ. ಒಂದು ಕಾಲದಲ್ಲಿ ಆಟದ ಅಪಾಯಕಾರಿ ತಂತ್ರಗಳು ಎನಿಸಿಕೊಂಡಿದ್ದ ಸ್ವಿಚ್ ಹಿಟ್, ರಿವರ್ಸ್ ಸ್ವೀಪ್ ಹೊಡೆತಗಳು ಈಗ ಆಟಗಾರನಿಗೆ ಸುಲಭವಾಗಿವೆ. ಈ ತಂತ್ರಗಳು



ಬೆಂಗಳೂರು ತಂಡಕ್ಕೆ 'ಕಪ್ ನಮ್ದೇ' ಎಂದು ಪ್ರತಿ ಸಲವೂ ಆತ್ಮವಿಶ್ವಾಸ ತುಂಬುವಂತೆ ಆಡುವ ವಿರಾಟ್ ಕೊಹ್ಲಿ